ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

## ಕಚೇರಿ ಆದೇಶ

ವಿಷಯ: 2011-12ನೇ ಸಾಲಿನಲ್ಲಿ ಕಿತ್ತೂರು ಉತ್ಸವ ಆಚರಿಸಲು ಹಣ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶದ ಸಂಖ್ಯೆ:ಕಸಂವಾಪ್ರ:1010:ಕಸಧ:2011, ದಿನಾಂಕ:07.10.2011.

**ಪ್ರಸ್ತಾವನೆ:**

2011-12ನೇ ಸಾಲಿನಲ್ಲಿ 2011ರ ಅಕ್ಟೋಬರ್ 23, 24 ಮತ್ತು 25ರಂದು ಕಿತ್ತೂರು ಉತ್ಸವವನ್ನು ಬೆಳಗಾವಿ ಜಿಲ್ಲೆಯ ಕಿತ್ತೂರಿನಲ್ಲಿ ಆಚರಿಸಲು ರೂ.80,00,000/-(ರೂಪಾಯಿ ಎಂಭತ್ತು ಲಕ್ಷ ಮಾತ್ರ)ಗಳನ್ನು ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ, ಇವರಿಗೆ ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ ಮಂಜೂರು ಮಾಡಲಾಗಿದೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ:ಕಸನಿ:ಕಿ.ಉ:2011-12, ಬೆಂಗಳೂರು, ದಿನಾಂಕ:20.10.2011**

ಮೇಲ್ಕಂಡ ಪ್ರಸ್ತಾವನೆಯಲ್ಲಿನ ಅಂಶಗಳ ಹಿನ್ನೆಲೆಯಲ್ಲಿ 2011-12ನೇ ಸಾಲಿನಲ್ಲಿ 2011ರ ಅಕ್ಟೋಬರ್ 23, 24 ಮತ್ತು 25ರಂದು ಕಿತ್ತೂರು ಉತ್ಸವವನ್ನು ಬೆಳಗಾವಿ ಜಿಲ್ಲೆಯ ಕಿತ್ತೂರಿನಲ್ಲಿ ಆಚರಿಸಲು ರೂ.80,00,000/-(ರೂಪಾಯಿ ಎಂಭತ್ತು ಲಕ್ಷ ಮಾತ್ರ)ಗಳನ್ನು ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುದಾನವನ್ನು ಬಿಡುಗಡೆ ಮಾಡಿ ಆದೇಶಿಸಿದೆ.

1) ಸರ್ಕಾರ ಯಾವ ಉದ್ದೇಶಕ್ಕೆ ಅನುದಾನ ಬಿಡುಗಡೆ ಮಾಡಿದೆಯೋ ಅದೇ ಉದ್ದೇಶಕ್ಕೆ ಬಳಸತಕ್ಕದ್ದು.
2) ಸರ್ಕಾರ ಮಂಜೂರು ಮಾಡಿದ ಹಣ ಸಮರ್ಪಕವಾಗಿ ಬಳಕೆಯಾದ ಬಗ್ಗೆ ಲೆಕ್ಕ ಪರಿಶೋಧಕರಿಂದ ದೃಢೀಕರಿಸಿದ ಲೆಕ್ಕಪಟ್ಟಿ ಹಾಗೂ ಹಣಬಳಕೆ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸುವುದು.
3) ಕರ್ನಾಟಕ ಪಾರದರ್ಶಕತೆ ಅಧಿನಿಯಮ 1999 ನಿಯಮ 2000 ನಿಯಮ ಮತ್ತು ಸರ್ಕಾರ ಆಗಿಂದಾಗ್ಗೆ ಹೊರಡಿಸಿದ ಸುತ್ತೋಲೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
4) ಉತ್ಸವ ನಡೆದ ಬಗ್ಗೆ ವರದಿಯನ್ನು ಇಲಾಖೆಗೆ ಸಲ್ಲಿಸುವುದು.

**ರೂ.80,00,000/-**ಗಳ ಅನುದಾನದಲ್ಲಿ **ರೂ.30,00,000/-**ಗಳನ್ನು 2011-12ನೇ ಸಾಲಿನ ಲೆಕ್ಕಶೀರ್ಷಿಕೆ **2205-00-102-4-01-101(ಯೋಜನೆ)** ಹಾಗೂ **ರೂ.50,00,000/-**ಗಳನ್ನು ಲೆಕ್ಕಶೀರ್ಷಿಕೆ **2205-00-102-4-31-059(ಯೋಜನೆ)**ಯಡಿ ಭರಿಸತಕ್ಕದ್ದು.

ಕರಡು ಆಯುಕ್ತರಿಂದ ಅನುಮೋದನೆಗೊಂಡಿದೆ.

ಆಯುಕ್ತರ ಪರವಾಗಿ.

ಪ್ರತಿ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಇಲಾಖೆ, ಬೆಂಗಳೂರು.
3. ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ.
4. ಜಿಲ್ಲಾ ಖಜಾನಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ.
5. ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಳಗಾವಿ ಜಿಲ್ಲೆ, ಬೆಳಗಾವಿ.
6. ಲೆಕ್ಕಪತ್ರ ಶಾಖೆ, ಹಂಚಿಕೆ ವಿಭಾಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
7. ವಿಷಯ ನಿರ್ವಾಹಕರು, ಎನ್.ಎಂ.ಸಿ. ಶಾಖೆ, ಕೇಂದ್ರ ಕಚೇರಿ, ಬೆಂಗಳೂರು ಇವರಿಗೆ ರೂ.80.00ಲಕ್ಷಗಳನ್ನು ಪ್ರತ್ಯೇಕ ಲೆಕ್ಕಶೀರ್ಷಿಕೆಯಡಿ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರ ಡಿ.ಡಿ.ಓ.ಕೋಡ್‌ಗೆ ಅಪ್‌ಲೋಡ್ ಮಾಡಲು ಸೂಚಿಸಿದೆ.
8. ಕಡತಕ್ಕೆ.